**ಎಮ್.ವಿ.ಸಿ. ನಂಃ 890/2022**

**ಆರ್.ಡಬ್ಲ್ಯೂಃ4,**

**ದಿನಾಂಕ : 11-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು :- ಶ್ರೀ . ಟಿ.ವಿ. ಪಿ. 4ನೇ ಎದುರುದಾರ ಪರ ವಕೀಲರಿಂದ :**

ನನ್ನ ವಾಹನದ ನಂಬರ: ಕೆಎ.32-ಡಿ-9993, ಅಪಘಾತ ಆದಾಗ ವಾಹನವನ್ನು ನಾನೇ ಚಲಾಯಿಸುತ್ತಿದ್ದೆ. ಆ ದಿನ ನಾನು ವಾಹನವನ್ನು ರಸ್ತೆಯ ಮಧ್ಯದಲ್ಲಿ ನಡೆಸುತ್ತಿದ್ದೆ ಎಂದರೆ ಸರಿಯಲ್ಲ. ನಾನು ವಾಹನವನ್ನು ತೆಗೆದುಕೊಂಡು ಹೋಗುತ್ತಿರುವಾಗ ಮುಂದೆ ಬರುತ್ತಿರುವ ವಾಹನ ಇನ್ನೊಂದು ವಾಹನ ಓವರಟೇಕ ಮಾಡಿ ನಮ್ಮ ವಾಹನಕ್ಕೆ ಡಿಕ್ಕಿ ಪಡಿಸಿತ್ತು. ನನ್ನ ವಾಹನಕ್ಕೆ ಮುಂದೆ ಜಖಂ ಆಗಿದೆ ಮತ್ತು ಅಪಘಾತ ಪಡಿಸಿದ ವಾಹನಕ್ಕೆ ಮುಂದೆ ಜಖಂ ಆಗಿದೆ. ನಮಗೆ ಡಿಕ್ಕಿ ಪಡಿಸಿದ ವಾಹನ ಎನ್ನಲಾದ ವಾಹನಕ್ಕೆ ನಿಪಿ-8 ರ ಪ್ರಕಾರ ಅದಕ್ಕೆ ಹಿಂದಗಡೆ ಜಖಂ ಆಗಿದೆ ಎಂದರೆ ಸಾಕ್ಷಿ ಅದು ವರದಿ ಸುಳ್ಳು ಇದೆ ಎಂದು ನುಡಿದಿರುತ್ತಾರೆ. ಸದರಿ ನಿಪಿ-8ರ ವರದಿ ನಮ್ಮ ವಕೀಲರಿಗೆ ಗೊತ್ತಿದೆ. ಸದರಿ ನಿಪಿ-8 ವರದಿ ಸುಳ್ಳು ಇದೆ ಅಂತಾ ಆ ಮೋಟಾರ ವಾಹನ ಅಧಿಕಾರಿಗೆ ಅರ್ಜಿ ಸಲ್ಲಿಸಿಲ್ಲಾ ಮತ್ತು ಕ್ರಮ ಕೈಗೊಂಡಿಲ್ಲಾ. ಕೆ.ಎ.-32-ಡಿ-2776 ವಾಹನ ಮಧ್ಯದಲ್ಲಿ ಹೋಗುತ್ತಿರುವಾಗ ನಾನು ಅತಿವೇಗನದಲ್ಲಿ ಹೋಗಿ ಹಿಂದಿನಿಂದ ಡಿಕ್ಕಿ ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಪಘಾತವು ನನ್ನ ನಿಷ್ಕಾಳಜಿತನ ಮತ್ತು ಅತಿವೇಗದಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ . ಪೋಲಿಸ ಅಧಿಕಾರಿಗಳು ತನಿಖೆ ಕೈಗೊಂಡು ನನ್ನ ಮತ್ತು ಇನ್ನೊಂದು ವಾಹನದ ಮೇಲೆ ಅಂತಿಮ ವರದಿ ಸಲ್ಲಿಸಿದ ಕಾರಣ ಅದನ್ನು ಲಾಭ ಪಡೆದುಕೊಳ್ಳಲು ಇನ್ನೊಂದು ವಾಹನದಿಂದ ಅಪಘಾತ ಆಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಪಿ-6 ರ ಪ್ರಕಾರ ಅಪಘಾತ ಸ್ಥಳ ಮಧ್ಯದಲ್ಲಿ ತೋರಿಸಿದ್ದಾರೆ ಎಂದರೆ ಸರಿಯಲ್ಲ . ನನಗೆ ಚಾಲನಾ ಪರವಾನಿಗೆ ಪತ್ರ ಇಲ್ಲದ ಕಾರಣ ನಾನು ಪರಿಹಾರ ಕೊಡಬೇಕಾಗುತ್ತದೆ ಎಂದು ಬೇರೆ ವಾಹನದಿಂದ ಅಪಘಾತ ಆಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಎಮ್.ವಿ.ಸಿ. ನಂಃ 890/2022**
**ಆರ್.ಡಬ್ಲ್ಯೂಃ4,**

**ಪಾಟಿ ಸವಾಲು :- ಶ್ರೀ . ವಿ. ಎಸ್ . ಆರ್ . ಅರ್ಜಿದಾರ ಪರ ವಕೀಲರಿಂದ :**

ವಾಹನದ ನಂಬರ: ಕೆಎ.32-ಡಿ-9993, ಅಪಘಾತ ಆದಾಗ ವಾಹನವನ್ನು ನಾನೇ ಚಲಾಯಿಸುತ್ತಿದ್ದೆ. ಅಪಘಾತವು ನನ್ನ ಮತ್ತು ಕೆ.ಎ.-32-ಡಿ-9993 ನಿಷ್ಕಾಳಜಿತನದಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ . ಮೃತ ಪ್ರಕಾಶನ ನನಗೆ ವೈಯಕ್ತಿಕ ಪರಿಚಯ ಇಲ್ಲಾ, ಆದ ಕಾರಣ ಆತನ ಸಂಬಳ, ಏನು ಕೆಲಸ ಮಾಡುತ್ತಾನೆ ಎಂದು ನನಗೆ ಗೊತ್ತಿಲ್ಲಾ. ಆದ ಕಾರಣ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಚಾಲನಾ ಪತ್ರ 2 ತಿಂಗಳು ಸಸ್ಪಂಡ್ ಆದ ನಂತರ ಅದನ್ನು ನವೀಕರಿಸಿ ಮತ್ತೇ ವಾಹನ ಚಲಾಯಿಸುತ್ತಿದ್ದೇನೆ. ನನ್ನ ಅಟೋ ಮತ್ತು ಕೆ.ಎ.-32-ಡಿ-9993 ಅಟೋ ದಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಆದ ಕಾರಣ ಇಬ್ಬರಿಂದ ತಪ್ಪಾದ ಕಾರಣ ಎರಡು ವಿಮೆ ಕಂಪನಿ ಮತ್ತು ನಾವು ಪರಿಹಾರ ನೀಡಲು ಭಾಧ್ಯಸ್ಥರು ಎಂದರೆ ಸರಿಯಲ್ಲ .

**ಮರು ವಿಚಾರಣೆ : ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**